**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.**

**ಅಸಲು ದಾವಾ ಸಂಖ್ಯೆ. 3/2023**

**ವಾ.ಸಾ-1**

**ಸಾಕ್ಷಿಗೆ ದಿನಾಂಕಃ 15-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ.ಎಂ.ಇ.ಹೆಚ್ ಪ್ರತಿವಾದಿಯರ ಪರ ವಕೀಲರಿಂದಃ**

1. ದಾವಾ ಆಸ್ತಿಗಳು ಮೂಲತಹ ಸರ್ಕಾರಿ ಗೋಮಾಳ ಜಮೀನುಗಳು ಎಂದರೆ ಸರಿ. ಸದರಿಯವುಗಳ ಮೂಲ ಸರ್ವೆ ನಂಬರ್ 58 ಎಂದರೆ ಸರಿ. ಸದರಿ ಸರ್ವೆ ನಂಬರ್ 58 ರಲ್ಲಿ ಒಟ್ಟು 250 ಎಕರೆ ಇರಬಹುದು ನನಗೆ ಗೊತ್ತಿಲ್ಲ.

2. ನನ್ನ ತಂದೆ ಜಮೀನನ್ನು ಖರೀದಿಸಿದ ನಂತರ ದುರಸ್ತಿ ಮಾಡಿಸಿದ್ದಾರೆ ಎಂದರೆ ಸರಿ. ದುರಸ್ಥಿಯ ನಂತರ ನಾವು ಖರೀದಿಸಿದ ಜಮೀನನ್ನು ಅಳತೆ ಮಾಡಿ ಗುರುತಿಸಿ ಕೊಟ್ಟಿದ್ದರು ಎಂದರೆ ಸರಿ. ದಾವಾ ಅನುಸೂಚಿತ 1 ನೇ ಆಸ್ತಿಯ ಪೂರ್ವಕ್ಕೆ ದಾವಾ ಅನುಸೂಚಿತ 2 ನೇ ಆಸ್ತಿ ಇದೆ. ಸದರಿ ಎರಡೂ ಆಸ್ತಿಗಳ ಸುತ್ತಲು ಬರುವ ಜಮೀನು ಸರ್ಕಾರಿ ಗೋಮಾಳದ ಜಮೀನು ಇದೆ ಎಂದರೆ ಸರ್ಕಾರಿ ಗೋಮಾಳ ಜಮೀನು ಮತ್ತು ಖರೀದಿದಾರರು ಕೂಡ ಇದ್ದಾರೆ ಎಂದು ನುಡಿಯುವರು.

3. ದಾವಾ ಅನುಸೂಚಿತ 2 ನೇ ಆಸ್ತಿಯ ದಕ್ಷಿಣಕ್ಕೆ ಸರ್ಕಾರಿ ಜಮೀನು ಎಂದು ಇದೆ ಎಂದರೆ ಸರಿ. ದಾವಾ ಆಸ್ತಿಗಳನ್ನು ಗ್ರಾಮ ನಕಾಷೆಯಲ್ಲಿ ನಮೂದು ಮಾಡಿ ನಮಗೆ ಗುರುತಿಸಿಕೊಟ್ಟಿದ್ದಾರೆ ಎಂದರೆ ಸರಿ. ಹೀಗೆ ದಾವಾ ಆಸ್ತಿಗಳನ್ನು ಗುರುತಿಸಿಕೊಟ್ಟ ನಂತರ ನಾನು ಆಸ್ತಿಗಳಲ್ಲಿ ಒಂದು ಮನೆಯನ್ನು ಕೂಡ ಕಟ್ಟಿದ್ದೇನೆ ಎಂದರೆ ಸರಿ. ಸದರಿ ಮನೆ ಕಟ್ಟಿರುವ ಜಾಗವನ್ನು ಹೊರತುಪಡಿಸಿ ಉಳಿದ ಜಾಗವು ಖಾಲಿ ಜಾಗ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು

**ಅಸಲು ದಾವಾ ಸಂಖ್ಯೆ. 3/2023**
**ವಾ.ಸಾ-1**

ಬಾವಿ ಮತ್ತು ತೆಂಗಿನ ಮರಗಳು ಇವೆ ಎಂದು ನುಡಿಯುವರು. ಸದರಿ ಬಾವಿ ಮತ್ತು ತೆಂಗಿನ ಮರಗಳು ಸರ್ಕಾರಿ ಜಮೀನಿನಲ್ಲಿ ಇವೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಗಳಲ್ಲಿ ನಾನು ಸ್ವಾಧೀನಾನುಬೋಗದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರಿ ಗೋಮಾಳ ಜಮೀನಿನಲ್ಲಿ ಅನಧೀಕೃತವಾಗಿ ಸ್ವಾಧೀನಾನುಬೋಗದಲ್ಲಿ ಇದ್ದೇನೆ ಎಂದರೆ ಸರಿಯಲ್ಲ. ನಾನು ಕ್ರಯಕ್ಕೆ ಪಡೆದಿರುವ ಜಮೀನಿನ ಕ್ರಯ ಪತ್ರದಂತೆ ದುರಸ್ಥಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ. ನಮ್ಮ ಸ್ವಾಧೀನದಂತೆ ದುರಸ್ಥಿ ಮಾಡಿಕೊಡಲು ಭೂದಾಖಲೆಯ ಕಛೇರಿಯಲ್ಲಿ ಅರ್ಜಿ ಸಲ್ಲಿಸಿದ್ದೇವೆ.

5. ಸದರಿ ನಾನು ಸಲ್ಲಿಸಿದ ಅರ್ಜಿಯ ಮೇಲಿನ ಆದೇಶದಂತೆ ದಾವಾ ಆಸ್ತಿಗಳ ದುರಸ್ಥಿಯನ್ನು ರದ್ದು ಪಡಿಸಿ ಆದೇಶಿಸಲಾಗಿದೆ ಎಂದರೆ ಸರಿ. ಈ ಕುರಿತು ನಿಪಿ-30 ರಂತೆ ಆದೇಶವಾಗಿದೆ ಎಂದರೆ ಸರಿ. ನಿಪಿ -30 ರಲ್ಲಿ ನಮ್ಮ ಸ್ವಾಧೀನಕ್ಕೆ ತಾಳೆ ಇಲ್ಲ ಎಂದು ನಮೂದು ಇದೆ ಎಂದರೆ ಸರಿ.

6. ನಾನು ದಾವಾ ಆಸ್ತಿಗಳಲ್ಲಿ ಸ್ವಾಧೀನಾನುಬೋಗದಲ್ಲಿ ಇಲ್ಲದೇ ಇರುವುದರಿಂದ ಸರ್ಕಾರಿ ಗೋಮಾಳ ಆಸ್ತಿಯಲ್ಲಿ ಸ್ವಾಧೀನ ಇರುವುದರಿಂದ ನಿಪಿ 30 ರಂತೆ ಆದೇಶವಾಗಿದೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಉಪ್ಪಾರಹಳ್ಳಿ ಗ್ರಾಮದ ನಕಾಷೆಯನ್ನು ಸಾಕ್ಷಿಗೆ ತೋರಿಸಲಾಗಿ ಸದರಿ ದಾಖಲಾತಿಯಲ್ಲಿ ಸರ್ವೆ ನಂಬರಿ 169 ಮತ್ತು 170 ನ್ನು ಗುರುತಿಸಲಾಗಿದೆ ಎಂದರೆ ಸಾಕ್ಷಿಯು ಒಪ್ಪಿಕೊಂಡಿರುತ್ತಾರೆ. **ಸಾಕ್ಷಿಯು ಸದರಿ ನಕಾಷಯೆನ್ನು ಒಪ್ಪಿಕೊಂಡ ಮೇರೆಗೆ ದಾಖಲಾತಿಯನ್ನು ನಿಡಿ 1 ಎಂದು ಗುರುತಿಸಲಾಗಿರುತ್ತದೆ.**

**ಅಸಲು ದಾವಾ ಸಂಖ್ಯೆ. 3/2023**
**ವಾ.ಸಾ-1**

7. ನಿಡಿ 1 ರಲ್ಲಿ ಸರ್ಕಾರಿ ಕಟ್ಟೆಯು ಸರ್ವೆ ನಂಬರ್ 58 ರಲ್ಲಿ ಬರುತ್ತದೆ ಎಂದರೆ ಸರಿ. ಧನಲಕ್ಷ್ಮಿ ಎಂದರೆ ನನ್ನ ಅಕ್ಕ. ಈ ದಾವೆಯನ್ನು ಸಲ್ಲಿಸಿದ ನಂತರ ದಾವ ಅನುಸೂಚಿತ 1 ನೇ ಆಸ್ತಿಯನ್ನು ನನ್ನ ಅಕ್ಕನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಟ್ಟಿದ್ದೇನೆ ಎಂದರೆ ಸರಿ. ದಾವಾ ಅನುಸೂಚಿತ 1 ನೇ ಆಸ್ತಿಯ ಖಾತೆಯು ನನ್ನ ಅಣ್ಣನ ಹೆಸರಿನಲ್ಲಿ ಇಲ್ಲ ಎಂದರೆ ಸರಿ.

8. ಅಸಲು ದಾವಾ ಸಂಖ್ಯೆ 284/2022 ರಂತೆ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಆಸ್ತಿಗಳಲ್ಲಿ ಅನಧೀಕೃತವಾಗಿ ಸ್ವಾಧೀನದಲ್ಲಿದ್ದೇವೆ ಮತ್ತು ನಮಗೆ ತೊಂದರೆ ಮಾಡಬಾರದು ಎಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಅಂದಾಜು 20 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ನಾಗಮಂಗಲ ಟೌನ್ ನಲ್ಲಿ 20 ಗುಂಟೆ ಇದೆ, ತೊಳಲಿ ಗ್ರಾಮದಲ್ಲಿ 20 ಗುಂಟೆ ಇದೆ.

9. ದಾವಾ ಆಸ್ತಿಗಳು ಖಾಲಿ ಜಮೀನು ಎಂದರೆ ಸರಿಯಲ್ಲ. ಅವುಗಳಲ್ಲಿ ತೆಂಗಿನ ಮರಗಳು ಇವೆ. ರಾಗಿ ಮತ್ತು ಇತರೆ ಬೆಳೆಗಳನ್ನು ಬೆಳೆಯುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಾನು ಯಾವುದೇ ಬೆಳೆ ಬೆಳೆಯುುತ್ತಿಲ್ಲ, ಆದರೆ ಸರ್ಕಾರಿ ಗೋಮಾಳದಲ್ಲಿರುವ ಜಾಗವನ್ನು ದಾವಾ ಆಸ್ತಿ ಎಂದು ಬಿಂಬಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 58 ರಲ್ಲಿ ಸ್ವಾಧೀನಾನುಬೋಗದಲ್ಲಿದ್ದು ದಾವಾ ಅಸ್ತಿಗಳಲ್ಲಿ ಸ್ವಾಧೀನಾನುಬೋಗದಲ್ಲಿ ಇಲ್ಲದೇ ಇದ್ದರೂ ಕೂಡ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

10. 2 ನೇ ಮದ್ಯಂತರ ಅರ್ಜಿಯ ಆದೇಶದ ವಿರುದ್ದ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ. ಸರ್ವೆ ನಂಬರ್ 58 ರಲ್ಲಿ ಪ್ರತಿವಾದಿಯರು ಜಮೀನನ್ನು

ಮಂಜೂರು ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಮೂದಿಸಿರುವ ಜಮೀನಿನಲ್ಲಿ ಪ್ರತಿವಾದಿಯರ ಸ್ವಾಧೀನಾನುಬೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಸ್ವಾಧೀನಾನುಬೋಗದಲ್ಲಿರುವ ಜಮೀನಿನಿಂದ ಅವರನ್ನು ಹೊರಗೆ ಹಾಕಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

11. ದಾವಾ ಆಸ್ತಿಗಳು ದುರಸ್ಥಿಯಾದ ನಂತರ ಅವುಗಳನ್ನು ಅಳತೆ ಮಾಡಿಸಿಲ್ಲ. ನಾವು ಈ ದಾವೆಯನ್ನು ಸಲ್ಲಿಸಿದ ನಂತರ ಜಮೀನನ್ನು ಅಳತೆ ಮಾಡಿಕೊಡುವಂತೆ ಸಂಬಂಧಪಟ್ಟ ಕಛೇರಿಗೆ ಸುಮಾರು 2-3 ಬಾರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ಅರ್ಜಿ ಸಲ್ಲಿಸಿದ ನಂತರ ನಿಡಿ 1 ರಂತೆ ಜಮೀನನ್ನು ಗುರುತಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಅರ್ಜಿ ಸಲ್ಲಿಸಿದ ನಂತರ ಜಮೀನಿನ ಅಳತೆಯಲ್ಲಿ ಬಂದಾಗ ನಾನು ಕೂಡ ಹಾಜರಿದ್ದೆ ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ಎಂದು ಛಾಯ ಚಿತ್ರವನ್ನು ತೋರಿಸಿ, ಸಾಕ್ಷಿಯು ಸದರಿ ಛಾಯ ಚಿತ್ರವನ್ನು ಅಧಿಕಾರಿಗಳು ಅಳತೆಗೆ ಬಂದಿದ್ದರು ಮತ್ತು ನಾನು ಹಾಜರಿದ್ದೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಉತ್ತರಿಸಿ ಒಪ್ಪಿಕೊಂಡಿರುತ್ತಾರೆ. ಸದರಿ ಛಾಯಾಚಿತ್ರವನ್ನು **ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ನಿಡಿ 2 ಎಂದು ಗುರುತಿಸಲಾಯಿತು.**

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.**